ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114

6ನೇ ವರ್ಷ 13ನೇ ಸಂಚಿಕೆ ಕೊಪ್ಪ 22-11-1987 ಭಾನುವಾರ ಬೆಲೆ 50 ಪೈಸೆ

ರೈ ತ ರ ಜಾ ಥಾ

ಚಿಕ್ಕಮಗಳೂರು : ರೈತರ ಸಮಸ್ಯೆಗಳಾದ ಸಾಲ, ಬೆಂಬಲದ ಬೆಲೆ, ಅಧಿಕಾರ ಶಾಹಿಯ ಕಿರುಕುಳಗಳು, ಲಂಚ ಹಾಗೂ ಕೃಷಿ ಮಾಡುತ್ತಿರುವ ಭೂಮಿಯಿಂದ ಒಕ್ಕಲೆಬ್ಬಿಸುತ್ತಿರುವುದು ಮುಂತಾದ ಸಮಸ್ಯೆಗಳ ಬಗ್ಗೆ ಸಾರ್ವಜನಿಕರ ಹಾಗೂ ಸರ್ಕಾರದ ಗಮನ ಸೆಳೆಯಲು ನ. 27ರಿಂದ 30ರ ವರೆಗೆ ಜಿಲ್ಲೆಯಲ್ಲಿ ರೈತ ಸಮುದಾಯದ ಕಾಲು ನಡಿಗೆಯ ಜಾಥ ನಡೆಸಲು ಚಿಕ್ಕಮಗಳೂರು ಜಿಲ್ಲಾ ರೈತ ಸಂಘ (ಎ.ಐ.ಕೆ.ಎಸ್.) ನಿರ್ಧರಿಸಿದೆ.

ನ. 30ರಂದು ಚಿಕ್ಕಮಗಳೂರು ನಗರದಲ್ಲಿ ಸೇರುವ ಈ ರೈತ ಸಮುದಾಯವು ಬೃಹತ್ ರ‍್ಯಾಲಿ ನಡೆಸುವುದೆಂದು ಸಂಘದ ಪ್ರಕಟಣೆ ತಿಳಿಸಿದೆ.

20ರೂ. ಜಗಳಕ್ಕೆ ಹೊಡೆದಾಟ: ಮಂ. ಪ್ರಧಾನರಿಗೆ ಪೆಟ್ಟು

ನ. ರಾ. ಪುರ : ಬಾಳೆ ಮಂಡಲದ ಪ್ರಧಾನ ಬಿ. ಎಸ್. ತಿಮ್ಮಯ್ಯ ಅವರಿಗೆ ನ. 15 ರಂದು 20 ರೂ. ವಸೂಲಿಗೆ ಸಂಬಂಧ ಪಟ್ಟ ಸಣ್ಣ ಜಗಳವೊಂದರಲ್ಲಿ ತಲೆಗೆ ತೀವ್ರ ಹೊಡೆತ ಬಿದ್ದ ಪರಿಣಾಮವಾಗಿ ಅವರನ್ನು ಶಿವಮೊಗ್ಗದ ಆಸ್ಪತ್ರೆಗೆ ಸೇರಿಸಿದ್ದು, ಅವರು ಚೇತರಿಸಿಕೊಳ್ಳುತ್ತಿದ್ದಾರೆ.

ಈ ಸಂಬಂಧ ದೂರು-ಪ್ರತಿ ದೂರುಗಳು ದಾಖಲಾಗಿದ್ದು, ಹಲ್ಲೆ ನಡೆಸಿದವರೆನ್ನಲಾದವರನ್ನು ಬಂಧಿಸಲಾಗಿತ್ತು. ಪ್ರಕರಣದಲ್ಲಿ ಪಕ್ಷ ರಾಜಕೀಯದ ಎಳೆಯೂ ಸೇರಿಕೊಂಡು 2-3 ದಿನ ನ. ರಾ. ಪುರ ಉದ್ವಿಗ್ನಗೊಂಡಿತ್ತು.

ನ. 18 ರಂದು ಎಪ್ಪಿ ಓಂ ಪ್ರಕಾಶ್ ಮತ್ತು ಊರಿನ ಮುಖಂಡರ ಸಮ್ಮುಖದಲ್ಲಿ ಎರಡೂ ಕಡೆಯವರ ಮಧ್ಯೆ ಸಂಧಾನ ನಡೆದು, ಪ್ರಕರಣ ಕೊನೆಗೊಂಡಿತೆಂದು ತಿಳಿದುಬಂದಿದೆ.

ಬಿಳುವಿನಕೊಡಿಗೆ ಜೋಡಿ ಕೊಲೆ-ದರೋಡೆ ಪ್ರಕರಣಕ್ಕೆ ತೆರೆ

ಹೆತ್ತವರನ್ನೇ ಕೊಲ್ಲಿಸಿದ ದುಸ್ಸಾಹಸಿ ಮತ್ತು ಅವನ ಸಹಚರರ ಬಂಧನ

ಕೊಪ್ಪ : ಬಿಳುವಿನಕೊಡಿಗೆಯ ಜೋಡಿ ಕೊಲೆ ಮತ್ತು ದರೋಡೆಯನ್ನು ಮೃತ ರಾಮಕೃಷ್ಣಯ್ಯನವರ ಮಗ ಸತ್ಯನಾರಾಯಣನೇ ಮಾಡಿಸಿರುವುದು ಸಾಕ್ಷ್ಯಾಧಾರಗಳ ಸಮೇತ ಇದೀಗ ಪತ್ತೆಯಾಗಿದ್ದು, ಅವನನ್ನೂ, ಜಯರಾಮ ಮತ್ತು ಅರುಣ ಎಂಬಿಬ್ಬರು ಆರೋಪಿಗಳನ್ನೂ ಬಂಧಿಸಿ ನ್ಯಾಯಾಂಗ ಬಂಧನಕ್ಕೊಳಪಡಿಸಲಾಗಿದೆ.

ತಾನು ಇಷ್ಟಪಟ್ಟ ಹುಡುಗಿಯನ್ನು ಮದುವೆಯಾಗಲು ಸಾಧ್ಯವಾಗದ ಪರಿಸ್ಥಿತಿ, ಪಟ್ಟಣದಲ್ಲಿ ಸುಖವಾಗಿ ಬದುಕಬೇಕೆಂಬ ಆಸೆಗೆ ತಂದೆ-ತಾಯಿಗಳ ಅಡ್ಡಿ — ಇವುಗಳಿಂದಾಗಿ ತಾನೇ ತನ್ನ ಸ್ನೇಹಿತರೊಡನೆ ತಂದೆ - ತಾಯಿಗಳ ಕೊಲೆಗೆ ಸಂಚು ಹೂಡಿದ್ದಾಗಿ ಸತ್ಯನಾರಾಯಣ ಪೋಲೀಸರೊಡನೆ ಒಪ್ಪಿಕೊಂಡಿದ್ದಾನೆಂದು ತಿಳಿದು ಬಂದಿದೆ.

ಖುದ್ದು ಕೃತ್ಯ ಎಸಗಿದ ಜಯರಾಮ (ಅಣ್ಣೇಗೌಡರ ಮಗ) ಹಾಗೂ ಕೃತ್ಯ ಎಸಗುವಾಗ ಹೊರಗೆ ಕಾವಲಿಗೆ ನಿಂತು ನೆರವಾದ ಅರುಣ ಎಂಬಿಬ್ಬರನ್ನೂ ಸತ್ಯನಾರಾಯಣ ಕೊಟ್ಟ ವಿಳಾಸಗಳ ನೆರವಿನಿಂದಲೇ ಬೆಂಗಳೂರಲ್ಲಿ ಬಂಧಿಸಿ ಕರೆತಂದು, ಕೊಲೆ ಮಾಡುವಾಗ ಬಳಸಿದ ಕಪ್ಪು ಮುಸುಕು ಮತ್ತಿತರ ಸಲಕರಣೆಗಳನ್ನೆಲ್ಲ ವಶಪಡಿಸಿಕೊಳ್ಳಲಾಗಿದೆ.

ಡಿವೈಎಸ್ಪಿ ರಾಜೇಂದ್ರ ಪ್ರಸಾದ್, ಸರ್ಕಲ್ ಇನ್‌ಸ್ಪೆಕ್ಟರ್ ಕೇಶವಾನಂದ ಇವರ ನೇತೃತ್ವದಲ್ಲಿ **ಹರಿಹರಪುರ ಠಾಣೆಯ ಅಪರಾಧ ವಿಭಾಗದ ದಫೇದಾರ್ ಮಂಜುನಾಥ್ ಮತ್ತು ಕೊಪ್ಪ ಠಾಣೆಯ ಅದೇ ವಿಭಾಗದ ಸಿಪಾಯಿ ತುಕ್ರಪ್ಪ ಇವರುಗಳು ಬೆಂಗಳೂರಲ್ಲಿ ಅತ್ಯಂತ ಸಾಹಸ ಮತ್ತು ಚಾಕಚಕ್ಯತೆಯಿಂದ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.**

ಕೃತ್ಯ ನಡೆಯುವ ಒಂದೆರಡು ದಿನ ಮೊದಲು ಸತ್ಯನಾರಾಯಣ ತನ್ನ ತಾಯಿಯ ಚಿನ್ನದ ಸರವನ್ನು ಶಿವಮೊಗ್ಗದಲ್ಲಿ ಮಾರಿದ್ದ. ಕೃತ್ಯಕ್ಕೆ ಎಲ್ಲ ಸಿದ್ಧತೆ ನಡೆಯಿತು. ರಾತ್ರಿ ಕೆಲಸ ಮುಗಿಸಿ ಆಳುಗಳೊಂದಿಗೆ ತಾನು ಹೋದುದಕ್ಕೆ ಸಂಕೇತವಾಗಿ ಟೇಪ್ ರೆಕಾರ್ಡರನ್ನು ದೊಡ್ಡದಾಗಿ ಹಾಕಿಟ್ಟು ಹೋದ. ಹೊಂಚು ಹಾಕುತ್ತಿದ್ದ ಆರೋಪಿಗಳು ಸಂಕೇತ ಗ್ರಹಿಸಿ ಬಂದು ಕೃತ್ಯ ಎಸಗಿ ಪರಾರಿಯಾದರು, ಜಯರಾಮ ಹಲ್ಲೆ, ಕಳವು ನಡೆಸುವಾಗ ಅರುಣ ಕಾವಲು ನಿಂತಿದ್ದ.

ಇದೆಲ್ಲ ಇವರು ಹಂಚಿಕೆ ಹೂಡಿದಂತೆಯೇ ನಡೆಯಿತು ಯಾರೋ ದರೋಡೆಕೋರರು ಈ ಕೃತ್ಯ ಎಸಗಿದ್ದಾರೆಂದು ನೋಡಿದವರು ನಂಬುವಂತೆ ನೋಡಿಕೊಂಡಿದ್ದರು. ಯಾವುದೇ ಸುಳಿವು ದೊರೆಯದಂತೆ ಜಯರಾಮ ಕಪ್ಪು ಮುಸುಕು, ಕೈಗೆ ಗ್ಲೌಸು, ಮೈಗೆ ಸೆಂಟು ಹಾಕಿಕೊಂಡಿದ್ದ.

ಅವರು ಪರಾರಿಯಾಗಿ ಸುಮಾರು 2 ಗಂಟೆಯ ನಂತರ ಸತ್ಯನಾರಾಯಣ ಬೊಬ್ಬೆ ಹೊಡೆದು ನೆರೆ-ಹೊರೆಯವರನ್ನು ಕರೆಯಬೇಕೆಂದು ತೀರ್ಮಾನಿಸಿದ್ದರು. ಆದರೆ 'ಯೋಜನೆ'ಯ ಈ ಭಾಗ ನಿರ್ವಹಿಸುವಲ್ಲಿ ತಡವರಿಸಿದ ಸತ್ಯನಾರಾಯಣ ಆಗಲೇ ಎಲ್ಲರಲ್ಲಿ ಸಂದೇಹ ಮೂಡಿಸಿ, ಹೇಗೂ ಬಯಲಾಗಿಯೇ ಆಗುತ್ತಿದ್ದ ಪ್ರಕರಣ ಮತ್ತಷ್ಟು ಶೀಘ್ರವಾಗಿ ಪತ್ತೆಯಾಗುವಂತೆ 'ಸಹಕರಿಸಿದ'.

'ಗುಬ್ಬಿ ಮೇಲೆ ಬ್ರಹ್ಮಾಸ್ತ್ರ': ರಕ್ಷಣೆಗೆ ದಲಿತರ ಮೊರೆ

ಜಯಪುರ : ಇಲ್ಲಿಗೆ ಸಮೀಪದ ಎಲೆಮಡಲು ಗ್ರಾಮದ ಸ. ನಂ. 6ರ ಸರ್ಕಾರಿ ಖಾಲಿ ಭೂಮಿಯಲ್ಲಿ ಕಳೆದ ಒಂದು ವರ್ಷದಿಂದ ಅನಧಿಕೃತವಾಗಿ ಮನೆ ಕಟ್ಟಿಕೊಂಡಿರುವ 7 ಜನ ಕೃಷಿ ಕಾರ್ಮಿಕರು, ಕೊಪ್ಪ ತಹಸೀಲ್ದಾರರ "ಹೊರ ದೂಡುವ ನೋಟೀಸ್" ವಿರುದ್ಧ ರಕ್ಷಣೆ ಕೋರಿ ಜಿಲ್ಲಾ ದಲಿತ ಸಂಘರ್ಷ ಸಮಿತಿಯ ಮೊರೆ ಹೊಕ್ಕಿದ್ದಾರೆ.

ಇವರೆಲ್ಲ 2 ರಿಂದ 22 ಗುಂಟೆವರೆಗೆ ಒತ್ತುವರಿ ಮಾಡಿಕೊಂಡಿದ್ದಾರೆಂದು ನೋಟೀಸಿನಲ್ಲಿ ಹೇಳಲಾಗಿರುವ ಭೂಮಿಯನ್ನು ಒಂದು ವಾರದೊಳಗೆ ಖುಲ್ಲಾ ಮಾಡುವಂತೆ ನೋಟೀಸಿನಲ್ಲಿ ತಾಕೀತು ಮಾಡಲಾಗಿದೆ

ತಹಸೀಲ್ದಾರ್ ವಿವರಣೆ

ಅದು ಗ್ರಾಮದ ಮಧ್ಯೆ ಒಂದು ಒಳ್ಳೆಯ ಜಾಗ. ಅಲ್ಲಿ ರಾತೋರಾತ್ರಿ ಈಗೆರಡು ತಿಂಗಳ ಹಿಂದೆ ಮನೆ ಕಟ್ಟಿದ್ದಾರೆ. ಮನೆದಳಕ್ಕೆಂದು ಅರ್ಧ ಎಕರೆ-ಒಂದೆಕರೆ ಜಾಗಕ್ಕೆ ಬೇಲಿ ಹಾಕಿಕೊಳ್ಳುತ್ತಾರೆ. 'ಹೀಗಾದರೆ ಹೇಳುವವರು-ಕೇಳುವವರು ಯಾರು ?' ಎಂದು ಗ್ರಾಮಸ್ಥರು ವಿರೋಧಿಸಿ ಮನವಿ ಸಲ್ಲಿಸಿದ್ದಾರೆ.

ಇವರುಗಳು ಬೇಕಿದ್ದರೆ ಜನತಾ ನಿವೇಶನಕ್ಕೆ ಅರ್ಜಿ ಸಲ್ಲಿಸಿದಲ್ಲಿ ಸೂಕ್ತ ಜಾಗ ನೋಡಿ, ಕ್ರಮಬದ್ಧವಾಗಿ ಲೇ-ಔಟ್ ಮಾಡಿ, ನಿವೇಶನ ನೀಡಲಾಗುವುದು. ಈ ಬಗ್ಗೆ ಮಂಡಲ ಪಂಚಾಯಿತ್ತಿಗಳಿಗೆ ಸಹ ತಿಳುವಳಿಕೆ ನೀಡಲಾಗಿದೆ... ಎಂದು ಕೊಪ್ಪ ತಹಸೀಲ್ದಾರರು 'ಮುಂಜಾವು'ಗೆ ತಿಳಿಸಿದರು.

ದಲಿತರ ಹೇಳಿಕೆ

ಈ ಬಗ್ಗೆ ದಲಿತರು ಹೀಗೆ ಹೇಳುತ್ತಾರೆ- ನಾವು ಐದಾರು ವರ್ಷದಿಂದಲೂ ಜಮೀನಿಗಾಗಿ, ನಿವೇಶನಕ್ಕಾಗಿ ಅರ್ಜಿ ಸಲ್ಲಿಸುತ್ತಲೇ ಇದ್ದೇವೆ, ಮೊದಲು ಸ. ನಂ. 195ರಲ್ಲಿ ತಲಾ 2ರಿಂದ 4 ಎಕರೆವರೆಗೆ ದರ್ಖಾಸ್ತು ಕೇಳಿದೆವು. ಸಿಗಲಿಲ್ಲ. ಅನಂತರ ಅಲ್ಲೇ ನಿವೇಶನ ಕೇಳಿದೆವು. ಅದೂ ಸಿಗಲಿಲ್ಲ. ರೆವಿನ್ಯೂ ಇನ್‌ಸ್ಪೆಕ್ಟರನ್ನು ಕೇಳಿದ್ದಕ್ಕೆ, "ಮನೆ ಕಟ್ಟಿಕೊಳ್ಳಿ; ಮಂಜೂರು ಮಾಡಿಕೊಡುತ್ತೇವೆ" ಎಂದರು. ಆದರೆ ನಮಗೆ ಆಗ ಮಂಜೂರಾತಿಯಿಲ್ಲದೆ ಮನೆ ಕಟ್ಟಲು ಧೈರ್ಯ ಸಾಲದೆ ಮತ್ತೂ ಪ್ರಯತ್ನ ಮುಂದುವರಿಸಿದೆವು

ಸುಮಾರು ಒಂದೂವರೆ ವರ್ಷದ ಹಿಂದೆ (ಜಿ. ಪ. ಚುನಾವಣೆಗೆ ಮುಂಚೆ) ಈ ಸ್ಥಳಕ್ಕಾಗಿ ಅರ್ಜಿ ಸಲ್ಲಿಸಿದೆವು. ಆಗಲೂ, ಎಷ್ಟು ಬಾರಿ ಅಲೆದರೂ ಜಾಗ ಮಂಜೂರಾಗಲಿಲ್ಲ. ಕೊನೆಗೆ ಸುಮಾರು ಒಂದು ವರ್ಷದ ಹಿಂದೆ ಎಲ್ಲರೂ ಒಟ್ಟಾಗಿ ಮನೆ ಕಟ್ಟಿಕೊಂಡೆವು.

ಸಾಮೂಹಿಕವಾಗಿ ಹಗಲೇ ಕಟ್ಟಿದ್ದು

ಅದೇನೂ ರಾತೋರಾತ್ರಿ ಕಟ್ಟಿದ್ದಲ್ಲ. ಹಗಲೇ, ಎಲ್ಲರೂ ಒಟ್ಟಾಗಿ, ಸುಮಾರು 1 ತಿಂಗಳ ಕಾಲ ಕೆಲಸ ಮಾಡಿ ಕಟ್ಟಿದ್ದೇವೆ. (ಕೂಲಿ ಮಾಡಿ ಬಿಡುವಿನ ವೇಳೆಯಲ್ಲಿ.) ರೆವಿನ್ಯೂ ಇನ್‌ಸ್ಪೆಕ್ಟರರೂ ನೋಡಿದ್ದಾರೆ. ಆಗ ಯಾರೂ ಅಡ್ಡಿ ಪಡಿಸಿಲ್ಲ. ನೋಟೀಸಿನಲ್ಲಿ ತಿಳಿಸಿದಂತೆ 15-20 ಗುಂಟೆಗೆಲ್ಲ ಬೇಲಿ ಹಾಕಿಲ್ಲ. ಅಳತೆಯೇನೂ ಮಾಡದೆ ಒಟ್ಟಾರೆ ನೋಟೀಸಿನಲ್ಲಿ ನಮೂದಿಸಲಾಗಿದೆ.

ಈ ಜಾಗ ಜಾನುವಾರು ಮೇಯಿಸಲಿಕ್ಕೆ ಬೇಕೆಂದು ಸ್ಥಳೀಯ ಕೆಲ ಮಂದಿ ಜಮೀನುದಾರರುಗಳು ದೂರು ನೀಡಿದ್ದಾರಂತೆ. ಆದರೆ ಪಕ್ಕದಲ್ಲೇ ಇದ್ದ ಜಾನುವಾರು ಮೇಯುವ ಎಕರೆಗಟ್ಟಲೆ ಭೂಮಿಯನ್ನು ಇವರುಗಳೇ ಒತ್ತುವರಿ ಮಾಡಿಕೊಂಡಿದ್ದಾರೆ ಈಗ ಬಹುಶಃ ರಸ್ತೆ ಪಕ್ಕದ ಈ ಭೂಮಿಯ ಮೇಲೂ ಕಣ್ಣು ಹಾಕಿರಬಹುದು !

ಅನ್ಯಾಯ, ದಬ್ಬಾಳಿಕೆ

ಇವರುಗಳ ಆಕ್ರಮ ಸಾಗುವಳಿಗಳ ಒಂದಂಗುಲವನ್ನೂ ಖುಲ್ಲಾ ಮಾಡಿಸಲಾರದ ಸರ್ಕಾರಿ ಅಧಿಕಾರಿಗಳು ನಮ್ಮ ಮೇಲೆ 'ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ'ವೆಂಬಂತೆ "ಹೊರ ದೂಡುವ" ಕಾರ್ಯಾಚರಣೆಗಿಳಿದಿರುವುದು ತೀರಾ ಅನ್ಯಾಯದ ಕ್ರಮ; ನೆಲೆಯಿಲ್ಲದ ದುರ್ಬಲರ ಮೇಲೆ ದಬ್ಬಾಳಿಕೆ ನಡೆಸುವ ದುರಾಸೆಯ ಶ್ರೀಮಂತರೊಂದಿಗೆ ಶಾಮೀಲಾಗಿರುವ ವರ್ತನೆ....

—ಹೀಗೆನ್ನುವ ಈ ದಲಿತರು, ವಾಸಕ್ಕೆ ಬೇರೆ ಸ್ಥಳವಿಲ್ಲದ ತಮಗೆ ರಕ್ಷಣೆ ನೀಡಿ, ಇದೇ ಜಾಗವನ್ನು ಮಂಜೂರು ಮಾಡಿಕೊಡಬೇಕೆಂಬ ಮನವಿಯನ್ನು ಜಯಪುರ ಮಂಡಲ ಪ್ರಧಾನರಿಗೂ, ಜಿಲ್ಲಾಧಿಕಾರಿ ಮತ್ತು ಉಪ ವಿಭಾಗಾಧಿಕಾರಿಗಳಿಗೂ ಸಲ್ಲಿಸಿದ್ದಾರೆ.

ದೇವನೂರು ಮಹಾದೇವ ವಿವರಣೆ

ರಾಜ್ಯೋತ್ಸವ ಪ್ರಶಸ್ತಿ ಮತ್ತು ಶಿಕ್ಷಣ ಮಾಧ್ಯಮದ ಷರತ್ತು

ಪ್ರಚಲಿತ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ದೇವನೂರು ಮಹಾದೇವ ಅತ್ಯಂತ ಪ್ರಮುಖರಲ್ಲಿ ಒಬ್ಬರು. ಈ ವರ್ಷ ಅವರಿಗೆ ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡುವ ವಿಚಾರ ಪ್ರಕಟವಾದಾಗ ಅದನ್ನು ಅವರು ತಿರಸ್ಕರಿಸಿ, 'ಕನಿಷ್ಠ ಪ್ರಾಥಮಿಕ ಶಿಕ್ಷಣಕ್ಕಾದರೂ ರಾಜ್ಯ ಭಾಷೆ ಕನ್ನಡ ಮಾಧ್ಯಮವನ್ನು ಕಡ್ಡಾಯವಾಗಿ ಜಾರಿಗೆ ತರುವವರೆಗೆ ಈ ಪ್ರಶಸ್ತಿ ಸ್ವೀಕರಿಸಲಾರೆ' ಎಂದು ಬಿಟ್ಟರು. (ಈಗ್ಗೆ ನಾಲ್ಕೈದು ವರ್ಷದ ಹಿಂದೆ ಅಮೆರಿಕದ ಫೋರ್ಡ್‌ಫೌಂಡೇಶನ್ನಿನ ಸ್ಕಾಲರ್‌ಶಿಪ್‌ನ್ನೇ ತಿರಸ್ಕರಿಸಿದವರು ಅವರು!)

ತಮ್ಮ ಈ ನಿಲುವಿನ ಬಗ್ಗೆ ಅವರು ನೀಡಿರುವ ಸ್ಪಷ್ಟೀಕರಣ—ಅದೇ ಒಂದು ಆಳವಾದ, ಸ್ಪಷ್ಟವಾದ ಚಿಂತನೆಯ ಪ್ರತಿಫಲನವಾಗಿದೆ. ಈ ದೇಶದ ಜನ ದೂರದ ಭವಿಷ್ಯದಲ್ಲಾದರೂ ಒಂದಾಗಿ ಉಳಿದು, ಒಟ್ಟಿಗೆ ಬಾಳಬೇಕಾದರೆ ಎಂಥ ವಿಶಾಲ ಮನಸ್ಸಿನ, ಪೂರ್ವಾಗ್ರಹ ರಹಿತವಾದ ಚಿಂತನೆ ಮತ್ತು ಆಚರಣೆ ಬೇಕು ಎಂಬುದನ್ನು ಈ ನಿಲುವು ಸ್ಪಷ್ಟಗೊಳಿಸುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲ

ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಸ್ವೀಕರಿಸಲು ನಾನು "ಪ್ರಾಥಮಿಕ ಶಿಕ್ಷಣವನ್ನಾದರೂ ರಾಜ್ಯದಲ್ಲಿ ರಾಜ್ಯಭಾಷೆ ಕನ್ನಡ ಮಾಧ್ಯಮದಲ್ಲಿ ಮಾತ್ರವೇ ನಡೆಸುವ" ಷರತ್ತು ಹಾಕಿರುವ ಬಗ್ಗೆ, 'ಭಾಷಾ ಕಲಿಕೆ'ಗೂ 'ಮಾಧ್ಯಮ ಭಾಷೆ'ಗೂ ಬೆರಸಿ ಅನೇಕ ಗೆಳೆಯರು ಗೊಂದಲದಿಂದ ಪ್ರಶ್ನಿಸುತ್ತಿದ್ದಾರೆ. ಈ ಬಗ್ಗೆ ಪಶ್ಚಿಮ ಬಂಗಾಳದ ಕಮ್ಯೂನಿಸ್ಟ್ ಸರ್ಕಾರವು 'ಮಾತೃಭಾಷೆಯೇ ಶಿಕ್ಷಣ ಮಾಧ್ಯಮ' ಮಾಡಿದಷ್ಟರಿಂದ ನಾವು ಮೊದಲ ಹೆಜ್ಜೆ ಇಡಬಹುದು. ಇಂಥ ಹೆಜ್ಜೆ ನಮ್ಮ ಡೊಂಕು ನೆಲದಲ್ಲೂ ನರ್ತಿಸಬಲ್ಲ ನೃತ್ಯಗಾತಿಗೆ ಮಾತ್ರ ಸಾಧ್ಯವಾಗುತ್ತದೆ. ನಮ್ಮ ಸರ್ಕಾರವು ನೃತ್ಯಗಾತಿಯಾಗಲಿ ಎಂದು ಆಶಿಸುತ್ತ ನನ್ನ ಅನ್ನಿಸಿಕೆಗಳನ್ನು ಹಂಚಿಕೊಳ್ಳುತ್ತಿರುವೆ.

ರಾಜ್ಯ ಭಾಷೆ ಕನ್ನಡವು ಪ್ರಾಥಮಿಕ ಶಿಕ್ಷಣ ಮಾಧ್ಯಮ ಆಗಲಿ ಎಂದು ನಾವು ಹೇಳುವ ಮೊದಲು, ಪರರಾಜ್ಯದಲ್ಲಿ ಇರುವ ಕನ್ನಡಿಗರ ಮಕ್ಕಳು ಆಯಾ ಪರರಾಜ್ಯ ಭಾಷಾ ಶಿಕ್ಷಣ ಮಾಧ್ಯಮದಲ್ಲಿ ಕಲಿಯಬೇಕು ಎಂಬುದನ್ನು ಹೇಳಿಯೇ ಆರಂಭಿಸಬೇಕು. ನಮ್ಮ ಕಣ್ಣೆದುರೇ ಕನ್ನಡದ ಮಕ್ಕಳು ಇಂಗ್ಲೀಷ್ ವಾತಾವರಣ ಇಲ್ಲದಿದ್ದರೂ ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಯಲು ಸಾಧ್ಯವಾಗುವುದಾದರೆ. ಅದೇ ಮಕ್ಕಳು ದೇಸಿ ವಾತಾವರಣದಲ್ಲಿ ಆಯಾ ರಾಜ್ಯದ ಭಾಷಾ ಮಾಧ್ಯಮದಲ್ಲಿ ಕಲಿಯುವುದು ಹೇಗೆ ತಾನೇ ಕಷ್ಟ? ಇಂಥ ಧೋರಣೆ ನಮಗಿದ್ದಾಗ ಮಾತ್ರ ನಮ್ಮ ರಾಜ್ಯದಲ್ಲಿರುವ ಪರರಾಜ್ಯದವರ ಮಕ್ಕಳು ಕನ್ನಡ ಮಾಧ್ಯಮದಲ್ಲಿ ಕಲಿಯಲು ಆರಂಭಿಸುತ್ತಾರೆ. ಅದಕ್ಕಾಗಿ ಇಂಗ್ಲೀಷ್ ಮಾಧ್ಯಮದ ಮೋಹವನ್ನು ನಾವು ಮೊದಲು ಬಿಟ್ಟು ದೇಸಿ ಆಗಬೇಕಾಗಿದೆ. ಈ ಸಂದರ್ಭದಲ್ಲಿ ಏಳುವ, ದೇಸಿ ಭಾಷೆ ಉರ್ದುಗೆ ಪ್ರತ್ಯೇಕ ರಾಜ್ಯ ಇಲ್ಲದ್ದರಿಂದ ಪ್ರತಿ ರಾಜ್ಯವು ಉರ್ದು ಮಾಧ್ಯಮಕ್ಕೆ ಅವಕಾಶ ಕಲ್ಪಿಸುವುದು ರಿಯಾಯಿತಿ ತೋರಿದಂತೇನೂ ಅಲ್ಲ. ಹಾಗೇ ಎಲ್ಲಾ ದೇಸಿ ಭಾಷೆಗಳ ಮಾಧ್ಯಮಕ್ಕೆ ರಾಷ್ಟ್ರದ ಎಲ್ಲಾ ರಾಜಧಾನಿಗಳಲ್ಲೂ ಅವಕಾಶ ಕಲ್ಪಿಸಿ ವರ್ಗಾವಣೆಯಾಗುವ ಪರಭಾಷಾ ನೌಕರರ ಮಕ್ಕಳ ಹಿತವನ್ನೂ ಗಮನಿಸಬಹುದು.

ಪ್ರಾಥಮಿಕ ಶಿಕ್ಷಣವು ಪ್ರಾದೇಶಿಕ ಭಾಷಾ ಮಾಧ್ಯಮದಲ್ಲಿ ಆದಾಗ ಅದರಲ್ಲಿ ಒಂದರಿಂದ ನಾಲ್ಕನೆ ತರಗತಿವರೆಗಿನ ಶಿಕ್ಷಣವನ್ನು ಉಪಭಾಷಾ (ಧಾರವಾಡ ಕನ್ನಡ, ತುಳು, ಕೊಂಕಣಿ, ಕೊಡವ ಇತ್ಯಾದಿ) ಮಾಧ್ಯಮದಲ್ಲಿ ಕಲಿಸುವುದು ಸೂಕ್ತವೆಂದು ಪರಿಶೀಲಿಸಬಹುದು. **ಈ ಬಗ್ಗೆ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನವು ಜೇನು ಕುರುಬರ ಮಕ್ಕಳಿಗಾಗಿ ರಚಿಸಿರುವ ಪಠ್ಯಪ್ರಯೋಗ ಗಮನಿಸಬಹುದು.**

ಆದರೆ, ನಮ್ಮ ಕನ್ನಡ ಚಳುವಳಿಗಾರರು ಮಾಧ್ಯಮದ ಬಗ್ಗೆ ಕೊಡಬೇಕಾದಷ್ಟು ಒತ್ತು ಕೊಡದೆ ಭಾಷಾ ಕಲಿಕೆ ಬಗ್ಗೆ ಕೂಗಾಡುತ್ತಿರುವುದು, ಹಡಗಲ್ಲಿ ಹೋಗುವುದರತ್ತ ಕಣ್ಮುಚ್ಚಿ ಅಡಿಕೆಯಲ್ಲಿ ಹೋಗುತ್ತಿರುವುದಕ್ಕೆ ಬಾಯಿ ಬಡಿದುಕೊಂಡಂತಾಗುತ್ತಿದೆ. ಅಥವಾ ನಮಗೂ ಇಂಗ್ಲೀಷ್ **ಮಾಧ್ಯಮದ ಒಳಾಸೆ ಇನ್ನೂ ಪೂರಾ ಹೋಗಿಲ್ಲವೋ?**

ಮುಂದೆ, ಮಾಧ್ಯಮವು ರಾಜ್ಯ ಭಾಷೆ ಆದಾಗ ಮಾತ್ರವೇ ಭಾಷೆ ಕಲಿಕೆ ಬಗ್ಗೆ ಕೆಳಕಂಡಂತೆ ಚಿಂತಿಸಬಹುದು: ಏನೆಂದರೆ,

(ಅ) ಒಂದನೇ ತರಗತಿಯಿಂದಲೂ ಇಂಗ್ಲೀಷ್ ಭಾಷೆ ಕಲಿಸಿದರೂ ಉಪಯುಕ್ತವೆನಿಸುತ್ತದೆ. ಅದಕ್ಕೆ ತಕ್ಕಂತೆ ಭಾಷಾ ಕಲಿಕೆ ದೃಷ್ಟಿಯಿಂದ ಪಠ್ಯರೂಪಿಸಬೇಕಾಗುತ್ತದೆ.

(ಆ) ಐದನೆ ತರಗತಿಯಿಂದ ಸಂಪರ್ಕ ಭಾಷೆ (ನನಗೆ ದೇವನಾಗರಿ ಅಥವಾ ರೋಮನ್ ಲಿಪಿಯ ಉರ್ದು) ಕಲಿಕೆ ಆರಂಭಿಸಿದರೆ ಒಳ್ಳೆಯದೆನಿಸುತ್ತದೆ. ಈ ಉದ್ದೇಶಕ್ಕೆ ತಕ್ಕಂತೆ ಹಾಗೂ ಭಾಷಾ ಕಲಿಕೆ ದೃಷ್ಟಿಯಿಂದ ಪಠ್ಯ ರೂಪಿಸಬೇಕಾಗುತ್ತದೆ.

(ಇ) ಕನ್ನಡ ಭಾಷಾ ಕಲಿಕೆಯಲ್ಲಿ ನಮಗೆ ಅಗತ್ಯವಿರುವುದು – **ತಾಂತ್ರಿಕ ಮತ್ತು** ಆಡಳಿತಾತ್ಮಕ ದೃಷ್ಟಿಯಿಂದ ಭಾಷಾ ಕಲಿಕೆ. ಇದಕ್ಕೆ ತಕ್ಕಾಗಿ ಪಠ್ಯ ರಚನೆ ರೂಪಿಸಬೇಕಾಗುತ್ತದೆ.

ಹೀಗೆ ಮಾಧ್ಯಮವು ರಾಜ್ಯ ಭಾಷೆ ಆದಾಗ ಮಾತ್ರ ಭಾಷಾ ಕಲಿಕೆಯಲ್ಲಿ ಅಂಕಗಳನ್ನು ಇಂಗ್ಲೀಷ್‌ಗೆ – 100 (ನೂರು), ದೇವನಾಗರಿ ಅಥವಾ ರೋಮನ್ ಲಿಪಿಯ ಸಂಪರ್ಕ ಭಾಷೆ ಉರ್ದುಗೆ–75 (ಎಪ್ಪತ್ತೈದು), ತಾಂತ್ರಿಕ ಆಡಳಿತಾತ್ಮಕ ಕನ್ನಡಕ್ಕೆ –50 (ಐವತ್ತು)—ಹೀಗೆ ಅಂಕಗಳನ್ನು ಇಟ್ಟು ಭಾಷಾ ಕಲಿಕೆ ಸಮಸ್ಯೆ ಬಗೆಹರಿಸುವುದು—**ಪ್ರಾದೇಶಿಕ ಭಾಷೆಯೇ ಶಿಕ್ಷಣ ಮಾಧ್ಯಮವಾದಾಗ**—ಸಮಂಜಸವೆನಿಸುತ್ತದೆ.

ಇನ್ನು ಸಂಪರ್ಕ ಭಾಷೆಯ ಸಮಸ್ಯೆ ಎದುರಾದಾಗ—

ಭಾರತದ ಎಲ್ಲಾ ರಾಜ್ಯಗಳಲ್ಲೂ ಉರ್ದುವು ಸಾಮಾನ್ಯವಾಗಿ ವ್ಯಾಪಿಸಿರುವ ಭಾಷೆಯಾಗಿರುವುದರಿಂದ ಉರ್ದು ಭಾಷೆಗೆ ದೇವನಾಗರಿ ಅಥವಾ ರೋಮನ್ ಲಿಪಿ ಅಳವಡಿಸಿ ಸಂಪರ್ಕ ಭಾಷೆಯಾಗಿಸುವುದು ಅನುಕೂಲಕರವೆನಿಸುತ್ತದೆ. ಈ ಲಿಪಿ ಬದಲಾವಣೆಯಿಂದಾಗಿ ಉರ್ದುವೂ **ಹಿಂದುಸ್ತಾನಿ** ಆಗಿಬಿಡುವುದರಿಂದ ಹಾಗೂ **ಉರ್ದುಗೆ ಆಡಳಿತ ಅನುಭವ ಇರುವುದರಿಂದ** ಇದು ನಿಭಾಯಿಸಬಹುದೆನಿಸುತ್ತದೆ. ಇದರೊಡನೆ ಅಗತ್ಯವಿದ್ದಾಗ ಅಲ್ಲಲ್ಲಿ ಆಗಾಗ ಇಂಗ್ಲೀಷ್ ಬಳಕೆ ಪೂರಕವೇ ಆಗುತ್ತದೆ.

ಈಗಿನ ವಿಚಾರಕ್ಕೆ ನೇರ ಸಂಬಂಧಿಸಿಲ್ಲದಿದ್ದರೂ ದೂರದಲ್ಲಿ ಸಂಬಂಧಿಸಿದ ಇನ್ನೊಂದು ವಿಚಾರ. ಅಂತರಜಾತಿ ವಿವಾಹ ಮತ್ತು ಪರಭಾಷೆಯವರಿಗೆ ಎಲ್ಲಾ ರಾಜ್ಯಗಳಲ್ಲೂ ತಲಾ ಶೇಕಡಾ 10 ಉದ್ಯೋಗ ಮೀಸಲಾತಿ ನೀಡಿ ಇದರ ಪ್ರಮಾಣವನ್ನು ನಿಧಾನವಾಗಿ ಹೆಚ್ಚಿಸುತ್ತ, **ಇಂಥ ಬೆರಕೆ ಹಾಗೂ ನಾಟ ನೆಡುವ ಕೆಲಸ ಭಾರತದ ಉಳಿವಿಗೆ ಅಗತ್ಯವಿರುವುದನ್ನು ನಾವು ಮನಗಾಣಬೇಕು.**

(3ನೇ ಪುಟಕ್ಕೆ)

ಪದ್ಯದಂಕಣ

ಬೀದಿ ದೀಪ

ಓಟು ಕೇಳಲು ಬಂದರು
ರಾಜಕೀಯ ಧುರೀಣರು
'ನಿಮಗೇನು ಬೇಕು—
ಎಲ್ಲಾ ಮಾಡಿಸಿಕೊಡುತ್ತೇವೆ'ಂದರು
ಛೇ, ಇಷ್ಟು ಒಳ್ಳೆಯವರಾರು!
ಕೇಳಿಯೇಬಿಟ್ಟೆವು ಬೇಡಿಕೆ :
ನಮ್ಮ ಬೀದಿಗೊಂದು ಬೀದಿ ದೀಪ
ಕೊಟ್ಟರು ಆಶ್ವಾಸನೆ—
ಓಹೋ ಅಷ್ಟೇ ತಾನೆ ?
ಗೆದ್ದರೋ ಗೆದ್ದರು
ನಮ್ಮ ಧುರೀಣರು
ಆಯಿತೋ ಚುನಾವಣೆ—
ಧುರೀಣರಲ್ಲಾಯಿತು ಭಾರಿ ಬದಲಾವಣೆ

ಆಶ್ವಾಸನೆಗಳೆಲ್ಲವೂ ಮರೆತು
ತಮ್ಮವರೊಂದಿಗೆ ಬೆರೆತು,
ಭಾರಿ ಖುಷಿಯಲ್ಲಿರಲು
ನೆನಪಿಸಿದೆವು ಆಶ್ವಾಸನೆಯ
ಬಂದಿತಾಗ ಅವರಿಗೆ ಭಾರಿ ಕೋಪ
ನಮ್ಮನ್ನು ಕಂಡ ಜನರೆಂದರು—
'ಛೇ ಪಾಪ!'

—ಹಾಲ್ಮುತ್ತೂರು ಸತ್ಯನಾರಾಯಣ

ಸ್ವಾತಂತ್ರ್ಯಕ್ಕಾಗಿ

ಹೆಮ್ಮೆ ನನಗೆ ಹೀಗಿರುವುದಕ್ಕೆ
ಎದೆ ತಟ್ಟಿಕೊಳ್ಳುವೆ ನಾನು ಮಾಡಿದ್ದಕ್ಕಲ್ಲ
ಮಳೆಯಂತೆ ನನ್ನ ನಾಡಿನ ಮೇಲೆ
ಚೆಲ್ಲಿರುವುದು ನನ್ನ ರಕ್ತ
ನಾನು ಹೊರಟಿರುವೆ ಬಿಡುಗಡೆಗಾಗಿ,
ಬಂದೀಖಾನೆಯಿಂದ
ಇರುವುದೊಂದು ಬದುಕು ಕೊಡುವೆ
ಸ್ವಾತಂತ್ರ್ಯಕ್ಕಾಗಿ

—ಬೆಂಜಮಿನ್ ಮೊಲಾಯಿಸ್

ಅನುವಾದ: ರಂಜಾನ್ ದರ್ಗಾ

(ಬೆಂಜಮಿನ್ ಮೊಲಾಯಿಸ್ ನೇಣುಗಂಬವೇರಿದ ಹಿಂದಿನ ರಾತ್ರಿ ಬರೆದ ಕೊನೆಯ ಕವನ)

ಪ್ರಧಾನಿಯ ಬೋಯಿಂಗ್ ವೈಭೋಗ

ಹೊಸದಿಲ್ಲಿ, ನ. 16 : ಬರಗಾಲದಿಂದ ತತ್ತರಿಸುತ್ತಿರುವ ದೇಶದ ಪ್ರಧಾನಿ ರಾಜೀವ ಗಾಂಧಿಯವರು ಇತ್ತೀಚೆಗೆ ವ್ಯಾಂಕೋವರ್‌ನಲ್ಲಿ ನಡೆದ ಕಾಮನ್‌ವೆಲ್ತ್ ಶೃಂಗ ಸಭೆಗೆ ಹೋಗಿ ಬರಲು 15 ಕೋಟಿ ರೂ.ಗಳನ್ನು ವ್ಯಯಿಸಿದ ಆಘಾತಕರ ವಿವರ ಬಹಿರಂಗಗೊಂಡಿದೆ.

'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಭಾನುವಾರ ಪ್ರಕಟವಾದ ನೀರಜ ಚೌಧರಿ ಅವರ ವಿಶೇಷ ವರದಿಯಲ್ಲಿ ಪ್ರಧಾನಿ ಪ್ರವಾಸ ಹಾಗೂ ಅದ್ದೂರಿ ಊಟೋಪಚಾರಕ್ಕಾಗಿ ಮಾಡಲಾದ ಖರ್ಚಿನ ವಿವರಗಳನ್ನು ನೀಡಲಾಗಿದೆ.

ಪ್ರಪಂಚದ ಅತಿ ಶ್ರೀಮಂತರಲ್ಲಿ ಒಬ್ಬರಾದ ಬ್ರುನಿಯ ಸುಲ್ತಾನರನ್ನು ಬಿಟ್ಟರೆ, ವಿಶೇಷವಾಗಿ ಸಜ್ಜುಗೊಳಿಸಲಾದ ಬೋಯಿಂಗ್ 747 ವಿಮಾನದಲ್ಲಿ ಬಂದವರು ರಾಜೀವಗಾಂಧಿ ಮಾತ್ರ ಎಂದು ಹೇಳಲಾಗಿದೆ. ಈ ವಿಶೇಷ ವಿಮಾನವಲ್ಲದೆ ಇನ್ನೊಂದು ಬೋಯಿಂಗ್ ವಿಮಾನವನ್ನು ತುರ್ತು ಸಂದರ್ಭದಲ್ಲಿ ಬಳಸಲೆಂದು ಒಯ್ಯಲಾಗಿತ್ತು. ಪ್ರಧಾನಿಗೆಂದು ಸಾಬೂನಿನಿಂದ ಹಿಡಿದು 'ಕೇವ್ಯರ್' ಎಂಬ ರುಚಿಕಟ್ಟು ತಿನಿಸಿನವರೆಗೆ ಎಲ್ಲವನ್ನೂ ಪ್ರಪಂಚದಲ್ಲೇ ಅತ್ಯುತ್ತಮವಾದುದನ್ನು ಏರ್ ಇಂಡಿಯಾ ವ್ಯವಸ್ಥೆ ಮಾಡಿತ್ತು.

ವಿಮಾನದೊಳಗೆ ವಿಶೇಷ ಹಾಸಿಗೆಗಳನ್ನು ಲಂಡನ್‌ನಲ್ಲಿ ಅಳವಡಿಸಲಾಯಿತೆಂದು ಹೇಳಲಾಗಿದೆ. ಟರ್ಕಿಶ್ ಟವೆಲ್‌ಗಳನ್ನು

(3ನೇ ಪುಟಕ್ಕೆ)

'ನಾಪತ್ತೆ'ಯಾಗಿದ್ದ ಪೇಜಾವರ ಕಿರಿಯ ಸ್ವಾಮೀಜಿ

ಖಾಯಂ ವಾಸಕ್ಕಾಗಿ ಅಮೆರಿಕಕ್ಕೆ'

ಕಳೆದ ವಾರ ಪೀಠ ತ್ಯಾಗ ಮಾಡಿದ್ದಲ್ಲದೆ ನಾಪತ್ತೆಯೂ ಆಗಿ ಗುಲ್ಲಾಗಿದ್ದ ಪೇಜಾವರ ಮಠದ ಕಿರಿಯ ಗುರುಗಳಾದ ವಿಶ್ವವಿಜಯ ತೀರ್ಥರು ಅಮೆರಿಕದಲ್ಲಿ ಖಾಯಂ ವಾಸದ ವೀಸಾ ಪಡೆದು ನ. 13 ರಂದು ಸಿಂಗಪುರದ ಮಾರ್ಗವಾಗಿ ಲಾಸ್ ಎಂಜೆಲಿಸ್‌ಗೆ ತೆರಳಿದ್ದಾಗಿ ವರದಿಯಾಗಿದೆ.

ಅಲ್ಲಿ ಇವರಿಗಾಗಿ ಗುಜರಾತಿನ ವಾಣಿಜ್ಯೋದ್ಯಮಿಯೊಬ್ಬರು ದೇವಸ್ಥಾನ ಕಟ್ಟಿಸಿಕೊಡುವ ಭರವಸೆ ನೀಡಿದ್ದಾರೆನ್ನಲಾಗಿದೆ.

ಅವರ ಪೀಠ ತ್ಯಾಗವನ್ನು ಅನಿವಾರ್ಯವಾಗಿ, ನೋವಿನಿಂದ ಒಪ್ಪಿಕೊಂಡಿದ್ದು, ಸದ್ಯದಲ್ಲೇ ತಮ್ಮ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವುದಾಗಿ ವಿಶ್ವೇಶ ತೀರ್ಥರು ತಿಳಿಸಿದ್ದಾರೆ.

ಪೇಜಾವರ ಮತ್ತು ಅದಮಾರು ಮಠಗಳು ಅಂಕೋಲೆಯಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆಗೆ ಉದ್ದೇಶಿಸಿದ್ದರೂ, ಕುಂದಾಪುರದಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆಗಾಗಿ ಹಣ ಸಂಗ್ರಹಿಸುತ್ತಿರುವ ಮೊಗವೀರ ಸಮಾಜಕ್ಕೆ ಕಿರಿಯ ಸ್ವಾಮಿಗಳು ತಮ್ಮ ಬೆಂಬಲ ಮುಂದುವರಿಸಿದ ಹಿನ್ನೆಲೆಯಲ್ಲಿ, ಮಠದೊಳಗೆ ಉಂಟಾದ ಭಿನ್ನಾಭಿಪ್ರಾಯದ ಸರಮಾಲೆಯೇ ಇದಕ್ಕೆ ಕಾರಣವೆನ್ನಲಾಗಿದೆ.

ಶಿಕ್ಷಣ ಮಾಧ್ಯಮ : ದೇವನೂರು ವಿವರಣೆ

(2ನೇ ಪುಟದಿಂದ)

ಹಾಗೂ ನಾವು ನಮ್ಮ ಮಕ್ಕಳಿಗೆ ಕಡ್ಡಾಯವಾಗಿ ಚಿತ್ರಕಲೆ, ಸಂಗೀತ, ಸಾಹಿತ್ಯಾದಿಗಳನ್ನು ಎಳೆತನದಲ್ಲಿ ಕಲಿಸುವುದನ್ನು ಕೈಬಿಟ್ಟಿದ್ದೇವೆ. ಕಲಾ ಪ್ರಕಾರವು ಪರ ಜೀವ ಪ್ರವೇಶ ಗುಣ ಹೆಚ್ಚಿಸುವುದರಿಂದ ಹಾಗೂ ಅರ್ಥ ಮಾಡಿಕೊಳ್ಳುವಿಕೆಯನ್ನು (ಅರಿವನ್ನು) ಹೆಚ್ಚಿಸುವುದರಿಂದ ಅದು ಈ ನಮ್ಮ ಮತೀಯ, ಜಾತೀಯ ಪ್ರತ್ಯೇಕತಾ ಒಡಕಾಗಿರುವ ಭಾರತಕ್ಕೆ ಅತ್ಯಗತ್ಯ ಎಂಬುದನ್ನು ಈಗಲಾದರೂ ನಮ್ಮ ಉಳಿವಿಗಾಗಿ ನಾವು ಅರಿತುಕೊಳ್ಳಬೇಕಾಗಿದೆ.

ಕೊನೆಯದಾಗಿ, ಒಂದು ಲಾಲಿ ಟಚ್‌ನಿಂದ ನನ್ನ ಪತ್ರ ಮುಗಿಸುವೆ.

ಪ್ರಶಸ್ತಿ ಪ್ರಕಟವಾಗುವುದಕ್ಕೆ ಹಿಂದಿನ ದಿನ ಸಮಾಚಾರ ಗೊತ್ತಾಗಿ 'ನಾನು ನಿರಾಕರಿಸುವೆ' ಅಂದಾಗ ನನ್ನ ಚಿಕ್ಕ ಮಗಳು ಮಿತಾ ನನಗೆ ನೂರಾರು ಮುತ್ತು ಕೊಡುತ್ತಾ, 'ಅಪ್ಪಾ ಪ್ರಶಸ್ತಿ ತಗೋ -ತಗೋ' ಅಂತ ನನ್ನನ್ನು ಮುತ್ತಲ್ಲಿ ಮುಳುಗಿಸುತ್ತ- 'ಅಪ್ಪಾ ಪ್ರಶಸ್ತಿಯ ಶಾಲು ನನಗೆ ಕೊಡು, ಅಕ್ಕನಿಗೆ ಗೋಲ್ಡ್ ಮೆಡಲ್ ಕೊಡು, ಬರುವ ದುಡ್ಡಲ್ಲಿ ಮನೆಗೆ ಬಣ್ಣ ಹೊಡಿಸುವ, ಬೆಂಗಳೂರಲ್ಲಿ ಕೊಡುವ ಸೈಟನ್ನು ಇಲ್ಲದವರಿಗೆ ಕೊಡು, ಹೇಗೂ ನಮಗೆ ಮನೆ ಇದೆಯಲ್ಲಾ, ಆದರೆ ನನಗೆ ಮಾತ್ರ ಶಾಲೂ....' ಅಂತ ಆಗ ಆರಂಭಿಸಿದವಳ ಲಾಲಿ ಈಗಲೂ ನಿಂತಿಲ್ಲ

ನಮ್ಮ ಸರ್ಕಾರದಲ್ಲಿ ನಾನು ಪ್ರಿತಿಸುವ ಹಾಗೂ ನನ್ನನ್ನೂ ಪ್ರೀತಿಸುವ ಅನೇಕರು ಇದ್ದಾರೆ. ಮೇಲಿನಂತೆ ನಾನು ಕೇಳುತ್ತಿರುವುದು ಅವರಿಗೂ ಸರಿ ಅನ್ನಿಸುವುದಾದರೆ ನನ್ನ ಮಗಳ ಆಸೆಯನ್ನು ಅವರು ಚಿವುಟದೆ ಬೆಳೆಸಲಾರರೆ ?

—ದೇವನೂರು ಮಹಾದೇವ,
ಮೈಸೂರು

ಪ್ರಧಾನಿಯ ಬೋಯಿಂಗ್ ವೈಭೋಗ

(2ನೇ ಪುಟದಿಂದ)

ಸಿಂಗಾಪುರದಿಂದ, ಬೆಡ್‌ಶೀಟ್‌ಗಳನ್ನು ರೋಮ್‌ನಿಂದ ತಲೆದಿಂಬುಗಳನ್ನು ಸ್ವಿಜರ್ಲೆಂಡ್‌ನಿಂದ ತರಿಸಲಾಗಿತ್ತು. ಎಲ್ಲಾ ಸಾಬೂನು, ಸುಗಂಧ ದ್ರವ್ಯ ಮತ್ತು ಸ್ನಾನದ ವಸ್ತುಗಳನ್ನು ಸಿಂಗಾಪುರದಿಂದ, ಸ್ನ್ಯಾಕ್ ಮತ್ತು ಸಿಹಿ ತಿಂಡಿಗಳನ್ನು ಜಪಾನ್‌ನಿಂದ ಖರೀದಿಸಲಾಯಿತು.

ಸರಳತೆ ಬೋಧಿಸುವ, ಬಡ ಜನತೆಯ ಬಗ್ಗೆ ಕಣ್ಣೀರು ಸುರಿಸುವ ನಮ್ಮ ಪ್ರಧಾನಿಯ ಆಹಾರ ವಿವರದ ಮೆನೂಕಾರ್ಡಿಗೆ ಬೆಳ್ಳಿಯ ಅಂಚನ್ನು ಕಟ್ಟಲಾಗಿತ್ತು. ಪ್ರಪಂಚದ ಮೂಲೆ ಮೂಲೆಗಳಿಂದ ತರಿಸಿದ ವಿವಿಧ ನಮೂನೆಯ ಅತ್ಯುತ್ತಮ ಮದ್ಯಗಳ ವಿಶೇಷ ಬಾರನ್ನೇ ವಿಮಾನದಲ್ಲಿ ತೆರೆಯಲಾಗಿತ್ತು. ರಾಥ್ಮನ್, ಡನ್‌ಹಿಲ್, ಸ್ಟೇಟ್ ಎಕ್ಸ್‌ಪ್ರೆಸ್ ಮುಂತಾದ 80 ನಮೂನೆಯ ಸಿಗರೇಟುಗಳು ಸೇವೆಗೆ ಸಿದ್ಧವಾಗಿದ್ದವು. 'ಶ್ರೀಮಾನ್ ಪರಿಶುದ್ಧ'ರ ಜ್ಞಾನಜ್ಯೋತಿ ಬೆಳಗಲೆಂದು ಲಂಡನ್ ಮತ್ತು ನ್ಯೂಯಾರ್ಕ್‌ಗಳಿಂದ ತಾಜಾ ತಾಜಾ ಮ್ಯಾಗಸಿನ್‌ಗಳು ಹಾರಿ ಬರುತ್ತಿದ್ದವು!

ಬಳಸಿದ ಟೇಬಲ್ ಕ್ಲಾತ್, ನ್ಯಾಪರ್ಕಿಗಳೂ ಬಹಳ ಬೆಲೆಬಾಳುವಂಥಾದ್ದು. ವಿಶೇಷ ವಸ್ತುಗಳ ಹಾವಳಿ ಎಲ್ಲಿವರೆಗಿತ್ತೆಂದರೆ ವಿಮಾನದ ಸಭಾಂಗಣದಲ್ಲಿ ವಿಶೇಷ 'ಪೆನ್ಸಿಲ್'ಗಳೂ ಹಾಜರಿದ್ದವು.

ದರ್ಬಾರಿನ ಈ ಸೇವೆ ಪ್ರಧಾನಿ ಮತ್ತು ಅವರ ಸಹೋದ್ಯೋಗಿಗಳಿಗೆ ಮಾತ್ರ. ಅವರೊಂದಿಗೆ ತೆರಳಿದ್ದ ಪತ್ರಕರ್ತರಿಗೆ ಕೆಳ ದರ್ಜೆಯ ವ್ಯವಸ್ಥೆ ಮಾಡಲಾಗಿತ್ತು.

ಇಲ್ಲಿ ನೀಡಲಾಗಿರುವುದು ಕೆಲವೇ ವಿವರಗಳನ್ನಷ್ಟೆ. ತಿಂಡಿ ತಿನಿಸುಗಳ ವಿವರ ನೀಡಲು ತೊಡಗಿದರೆ ದೊಡ್ಡ ಪಟ್ಟಿಯೇ ಆಗುತ್ತದೆ. ಪ್ರಧಾನಿಗೆ ನೀಡಬೇಕಾದ ರಾಜ ವೈಭೋಗದ ನಿರ್ದೇಶನದ ಸುತ್ತೋಲೆ 61 ಪುಟಗಳಷ್ಟಿತ್ತು!

ಬರಗಾಲದ ಹಿನ್ನೆಲೆಯಲ್ಲಿ ಅನಾವಶ್ಯಕ ವೆಚ್ಚಗಳ ಮೇಲೆ ನಿರ್ಬಂಧ ಹೇರುವ ನೀತಿ ಯೆಲ್ಲಿ? ಇಂಥಾ ಅಂಧ ದರ್ಬಾರಿನ ನೀತಿ ಯೆಲ್ಲಿ? ಎಲ್ಲಾ ಬರೀ ಮೊಸಳೆ ಕಣ್ಣೀರು!?

(ಸೌಜನ್ಯ : 'ಮುಂಗಾರು')

ಶೃಂಗೇರಿ, ಕೊಪ್ಪ ಮೂಲಕ ಓಡಾಡಲಿರುವ
ಇನ್ನಷ್ಟು ರಾಜ್ಯ. ರ. ಸಾ. ಬಸ್‌ಗಳು

ಕೊಪ್ಪ : ಚಿಕ್ಕಮಗಳೂರು–ಶೃಂಗೇರಿ ನಡುವೆ ಇನ್ನೂ ಕೆಲವು ರಾಜ್ಯ ರಸ್ತೆ ಸಾರಿಗೆ ಬಸ್‌ಗಳನ್ನು ಓಡಿಸಲು ಒಪ್ಪಿಗೆ ದೊರೆತಿದ್ದು, ಬಸ್ ಓಡಿಸಲು ಪರವಾನಗಿಗಾಗಿ ಕ್ರಮ ತೆಗೆದುಕೊಳ್ಳಲಾಗುತ್ತಿದೆಯೆಂದು ರಾಜ್ಯ ರಸ್ತೆ ಸಾರಿಗೆಯ ಹಾಸನ ವಿಭಾಗೀಯ ನಿಯಂತ್ರಣಾಧಿಕಾರಿಯವರು ಬಾಳೆಹೊನ್ನೂರಿನ ರಸ್ತೆ ಬಳಕೆದಾರರ ವೇದಿಕೆಗೆ ತಿಳಿಸಿದ್ದಾರೆ.

ಹಾಗೆಯೇ, ಚನ್ನರಾಯಪಟ್ಟಣದಿಂದ ಹಾಸನ, ಚಿಕ್ಕಮಗಳೂರು, ಬಾಳೆಹೊನ್ನೂರು, ಕೊಪ್ಪ, ತೀರ್ಥಹಳ್ಳಿ ಮಾರ್ಗವಾಗಿ ಕೊಲ್ಲೂರಿಗೆ ಎರಡು ಬಸ್‌ಗಳನ್ನು ಓಡಿಸಲಾಗುವುದು. ಚನ್ನರಾಯಪಟ್ಟಣದಿಂದ ಬೆಳಿಗ್ಗೆ 6 ಗಂಟೆಗೆ ಹೊರಟ ಬಸ್ಸು ಸಂಜೆ 3 ಗಂಟೆಗೆ ಕೊಲ್ಲೂರಿಗೂ, ಕೊಲ್ಲೂರಿನಿಂದ ಬೆಳಿಗ್ಗೆ 9 ಗಂಟೆಗೆ ಹೊರಟು ಚನ್ನರಾಯಪಟ್ಟಣಕ್ಕೆ ಸಂಜೆ 6.15 ಗಂಟೆಗೂ ತಲುಪುವುದು.

ಸಕಲೇಶಪುರ–ಶೃಂಗೇರಿ ನಡುವೆ ಕೂಡ ಇನ್ನೊಂದು ಬಸ್ ಓಡಿಸಲಾಗುವುದೆಂದು ವೇದಿಕೆಗೆ ತಿಳಿಸಲಾಗಿದೆಯೆಂದು ಸಂಚಾಲಕ ಶಂಕರ ನಾರಾಯಣ ಭಟ್ ತಿಳಿಸಿದ್ದಾರೆ.

ಸ್ಥಳದಲ್ಲೆ ಚಿತ್ರ ಬರೆವ ಸ್ಪರ್ಧೆ

ಕೊಪ್ಪ : ಇಲ್ಲಿನ ಶ್ರೀ ಶಾರದಾ ಮಂದಿರ ಆಂಗ್ಲ ಮಾಧ್ಯಮ ವಸತಿ ಶಾಲೆಯಲ್ಲಿ ಮಕ್ಕಳ ದಿನಾಚರಣೆ ಅಂಗವಾಗಿ ಪುಟ್ಟ ಮಕ್ಕಳಿಗೆ ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ ಮತ್ತು ಆಟೋಟ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಶ್ರೀಮತಿ ಶಾರದಾ ಅಮೃತ ರಾವ್ ಅಧ್ಯಕ್ಷತೆ ವಹಿಸಿದ್ದರು. ಪುಟ್ಟ ಮಕ್ಕಳಿಂದ ಹಾಡು, ನೃತ್ಯ ಮುಂತಾದ ಕಾರ್ಯಕ್ರಮಗಳಾದುವು. ಶ್ರೀಮತಿ ಸುಚೇತಾ ಸ್ವಾಗತಿಸಿ, ಎಂ. ಆರ್. ಭಾಸ್ಕರ್ ವಂದಿಸಿದರು.

ರಾ. ಸೇ. ಯೋಜನೆ ವತಿಯಿಂದ ಶ್ರಮದಾನ

ಕೊಪ್ಪ: ಇಲ್ಲಿನ ಗುಣವಂತೆ ರಸ್ತೆ ಬಡಾವಣೆಯ ಹಿ. ಪ್ರಾ. ಶಾಲೆಯಲ್ಲಿ ನ. 14ರಂದು ಪ್ರ. ದ. ಕಾಲೇಜಿನ ರಾ. ಸೇ. ಯೋಜನೆಯ ವಿದ್ಯಾರ್ಥಿ – ವಿದ್ಯಾರ್ಥಿನಿಯರು ಶ್ರಮದಾನ ನಡೆಸಿ ಶಾಲಾ ಆಟದ ಮೈದಾನ ನಿರ್ಮಿಸಿದರು.

ಶಾಲಾ ಮುಖ್ಯೋಪಾಧ್ಯಾಯರಾದ ಬಸವರಾಜಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಮುಕ್ತಾಯ ಸಮಾರಂಭದಲ್ಲಿ ಕಾಲೇಜಿನ ರಾ. ಸೇ. ಯೋಜನಾಧಿಕಾರಿಗಳಾದ ಪೂರ್ಣೇಶ್ ಮತ್ತು ಸುರೇಂದ್ರ ಉಪಸ್ಥಿತರಿದ್ದರು. ರಾ. ಸೇ. ಯೋಜನೆಯ ಧ್ಯೇಯೋದ್ದೇಶಗಳನ್ನು ಪೂರ್ಣೇಶ್ ವಿವರಿಸಿದರು. ಸ್ಥಳೀಯ ವಿನಾಯಕ ಸೇವಾ ಸಮಿತಿಯವರು ಶ್ರಮದಾನಿಗಳಿಗೆ ನೆನಪಿನ ಕಾಣಿಕೆಗಳನ್ನು ನೀಡಿದರು.

ಶಾಲಾ ಮಕ್ಕಳು ಮತ್ತು ಸ್ಥಳೀಯ ಯುವಕರಿಂದ ಮನರಂಜನೆ ಕಾರ್ಯಕ್ರಮ ನಡೆಯಿತು. ಸ್ಥಳೀಯ ಶಿಕ್ಷಕ ರಾಜೇಂದ್ರ ಪ್ರಸಾದ್ ವಂದಿಸಿದರು. ಸುಮಾರು 55 ಮಂದಿ ಶ್ರಮದಾನಿಗಳೊಂದಿಗೆ ಸ್ಥಳೀಯ ಯುವಜನರೂ ಭಾಗವಹಿಸಿದ್ದರು.

ವಾಹನ ಅಪಘಾತ : ಬಸ್ತಿಮಠ ಸ್ವಾಮೀಜಿ ಪಾರು

ನ ರಾ. ಪುರ: ಇಲ್ಲಿನ ಜೈನ ಬಸ್ತಿ ಮಠದ ಲಕ್ಷ್ಮೀಸೇನ ಸ್ವಾಮಿಗಳು ಹಿರಿಯೂರಿನ ಹತ್ತಿರ ನಡೆದ ವಾಹನ ಅಪಘಾತದಲ್ಲಿ ಯಾವುದೇ ಅಪಾಯವಿಲ್ಲದೆ ಪಾರಾಗಿದ್ದು, ಅವರ ಕಾರು ತುಂಬಾ ಜಖಂಗೊಂಡಿದೆಯೆಂದು ತಿಳಿದು ಬಂದಿದೆ.

ಸಕಲೇಶಪುರ ಏಲಕ್ಕಿ ಧಾರಣೆ
ತಾ 17-11-1987

ಏಲಕ್ಕಿ ರೂ. 170 ರಿಂದ 180, ಜರಡಿ ರೂ. 150ರಿಂದ 160, ಉತ್ತಮ ರೂ. 140ರಿಂದ 145, ಕೂಳೆ ರೂ. 80 ರಿಂದ 90. ಬೀಜ ರೂ. 90ರಿಂದ 100

ಕರಿಮೆಣಸು ರೂ. 55 ರಿಂದ 56

ಶಿವಮೊಗ್ಗ ಅಡಿಕೆ ಧಾರಣೆ
ತಾ|| 19.11.1987

ಸರಕು : 3269 – 4670
ಬೆಟ್ಟೆ : 2079 – 2563
ಗೊರಬಲು : 912 – 1130

ಮಂಗಳೂರು ತಾ|| 19-11-1987

ಕಾಳು ಮೆಣಸು 5418
ಏಲಕ್ಕಿ ರೂ. 80 – 120

ಸಾಗರ ಅಡಿಕೆ ತಾ|| 18.11.87

ಇಡಿ ಅಡಿಕೆ ರೂ. 2165–2325
ಚಾಲಿ ರೂ. 1109–1339
ಸಿಪ್ಪೆ ಗೋಟು ರೂ. 389
ಆಪಿ ರೂ. 4061–4201
ರಾಶಿ ಗೋಟು ರೂ. 1049 ರಿಂದ 1206

ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ : ಮಂಗಳೂರು – 575 003
ಶಾಖೆ : ಕುದುರೆಗುಂಡಿ ಫೋನ್ : 44
ತಾ. 14-11-1987

ಏಲಂ ನೋಟೀಸ್

ಈ ಕೆಳಗಿನ ಮಹನೀಯರು ನಮ್ಮ ಶಾಖೆಯಿಂದ ವ್ಯಾಪಾರ/ಬೆಳೆ ಸಾಲವನ್ನು ಪಡೆದು ಸಕಾಲದಲ್ಲಿ ಮರುಪಾವತಿ ಮಾಡಿರುವುದಿಲ್ಲ. ಇವರುಗಳು ತಾರೀಖು 2 12.87ರ ಮೊದಲು ತಮ್ಮ ಸಾಲ ಮರುಪಾವತಿ ಮಾಡದೆ ಇದ್ದಲ್ಲಿ, ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸ್ ಮೂಲಕ ಕೇಳಿಕೊಂಡಂತೆ, ಅವರು ನಮ್ಮ ಬ್ಯಾಂಕಿನಲ್ಲಿ ಅಡವಿಟ್ಟ ನಗಗಳನ್ನು ತಾರೀಖು 2 12 87ರಂದು ಅಪರಾಹ್ನ 3 ಗಂಟೆಗೆ ಬ್ಯಾಂಕಿನ ವಠಾರದಲ್ಲಿ ಬಹಿರಂಗವಾಗಿ ಯಾ ಖಾಸಗಿಯಾಗಿ ಹರಾಜು ಮಾಡಲಾಗುತ್ತದೆ. ಈ ಸಂಬಂಧ ಬ್ಯಾಂಕಿಗೆ ಉಂಟಾಗಬಹುದಾದ ಸಕಲ ಖರ್ಚು ವ ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ ತಿಳಿದಿರಲಿ.

ಕ್ರ. ಸಂ.	ಸಾಲಗಾರರ ಹೆಸರು
1.	ಶ್ರೀ ಎಸ್. ಕೃಷ್ಣ ಕುಮಾರ್ S/o ಸಂಕಪ್ಪ, ಮರ್ಚೆಂಟ್ ನರಸಿಂಹರಾಜಪುರ
2.	ಶ್ರೀ ಬಿ. ಕುಮಾರ್ S/o ಕರುಣಾಕರನ್ ಉಮಾದೇವಿ ಕ್ಲಾತ್ ಸ್ಟೋರ್ಸ್, ಕುದ್ರೆಗುಂಡಿ
3.	ಶ್ರೀ ವಿಶ್ವನಾಥ ಶೆಟ್ಟಿ S/o ನಾಣು ಶೆಟ್ಟಿ ರಾಗೋಡ್, ಕುದ್ರೆಗುಂಡಿ ಅಂಚೆ
4.	ಶ್ರೀ ಎಚ್. ಸಿ. ಚಂದ್ರಶೇಖರ್ S/o ಚಂದುನಾಯ್ಕ ಹೊಳೇಕೊಪ್ಪ ಗ್ರಾಮ ಕಾನೂರು ಅಂಚೆ

ಕುದ್ರೆಗುಂಡಿ

(ಸಹಿ)
ವ್ಯವಸ್ಥಾಪಕರು

ಪ್ರೌಢಶಾಲಾ ಸಮಿತಿ (ರಿ.), ಹರಿಹರಪುರ

ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ

ಟೈಪ್‌ರೈಟರ್ ಕೊಳ್ಳಲು ಟೆಂಡರ್ ಕರೆದಿರುವುದು

ಕೆಲಸ ಮಾಡುತ್ತಿರುವ, ಇಂಗ್ಲೀಷ್ 'ಗಾಡ್‌ರೆಜ್' ಟೈಪ್‌ರೈಟರ್ ಒಂದನ್ನು ಮಾರಾಟ ಮಾಡಲಾಗುವುದು. ಇದನ್ನು ಕೊಳ್ಳಬಯಸುವವರು ಗೌ|| ಕಾರ್ಯದರ್ಶಿಯವರ ಹೆಸರಿಗೆ ಕ್ರಾಸ್ ಮಾಡಿದ 200-00 ರೂ. ಡಿ. ಡಿ.ಯೊಂದಿಗೆ, ಕೊಳ್ಳುವ ಬೆಲೆಯನ್ನು ನಮೂದಿಸಿ, ತಾ. 24.12.87 ಸಂಜೆ 4 ಗಂಟೆವಳಗೆ ಸೀಲ್ಡ್ ಟೆಂಡರನ್ನು ಕೆಳಗಿನ ವಿಳಾಸಕ್ಕೆ ತಲುಪಿಸುವುದು. ಟೆಂಡರ್ ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರ ಸಮಿತಿಯವರದ್ದಾಗಿರುತ್ತೆ. ಮಾರಾಟ ಮಾಡುವ, ಟೈಪ್‌ರೈಟರ್ ನೋಡಬಯಸುವವರು ಕೆಲಸದ ವೇಳೆಯಲ್ಲಿ ಶ್ರೀ ಎ. ಆರ್. ಎಸ್. ಕಿರಿಯ ವಿದ್ಯಾಲಯದಲ್ಲಿ ನೋಡಬಹುದು. ಅಂಗೀಕೃತ ಟೆಂಡರ್‌ದಾರರು ಪೂರ್ತಿ ಹಣ ನೀಡಿ ರಶೀದಿ ಪಡೆಯುವುದು. ಅಂಗೀಕರಿಸದಿರುವ ಟೆಂಡರ್‌ದಾರರ ಡಿ. ಡಿ.ಯನ್ನು ವಾಪಸ್ಸು ಮಾಡಲಾಗುವುದು ತಾ 24.12.87ರ ಸಂಜೆ 4 ಗಂಟೆಗೆ ಸೀಲ್ಡ್ ಟೆಂಡರುಗಳನ್ನು ಎಲ್ಲರ ಸಮಕ್ಷಮ ಓಪನ್ ಮಾಡಲಾಗುವುದು. ಇಷ್ಟ ಉಳ್ಳವರು ಮೇಲ್ಕಂಡ ಕಾಲೇಜಿನಲ್ಲಿ ಹಾಜರಿರಬಹುದು.

ಜೆ. ಪಿ. ನೀಲಕಂಠ ಭಟ್ಟ
ಗೌ|| ಕಾರ್ಯದರ್ಶಿ, ಪ್ರೌಢಶಾಲಾ ಸಮಿತಿ (ರಿ.),
ಹರಿಹರಪುರ ಅಂಚೆ – 577 120

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು : ಶ್ರೀ ಹರಿಗೆ ಅಚ್ಚುಕೂಟ, ಕೊಪ್ಪ.